**All India Radio: Bangalore**
**National Bulletin In Kannada**
**02.12.2025 1.10 p.m.**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**02.12.2025 1.10 p.m.**

**<><><><>**

ಮುಖ್ಯಾಂಶಗಳು

1. ಸಂಸತ್ತಿನ ಉಭಯ ಸದನಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಬಗ್ಗೆ ಗದ್ದಲ ಮುಂದುವರಿಕೆ; ಕಲಾಪ ಮಧ್ಯಾಹ್ನ ೨ ಗಂಟೆಗೆ ಮುಂದೂಡಿಕೆ
2. ಅಮೆರಿಕ ನೀತಿ ನಿರೂಪಕರೊಂದಿಗೆ ಭಾರತದ ರಾಯಭಾರಿ ವಿನಯ್ ಕ್ವಾತ್ರಾ ಫಲಪ್ರದ ಸಂವಾದ; ಇಂಧನ, ರಕ್ಷಣೆ, ವ್ಯಾಪಾರ ಕುರಿತು ಚರ್ಚೆ
3. ತೆರಿಗೆ ವಿಷಯದಲ್ಲಿ ಪಾರದರ್ಶಕತೆ, ಭಾರತದ ಆದ್ಯತೆ- ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್
4. ೨೦೩೦ರವೇಳೆಗೆ ಭಾರತದೊಂದಿಗೆ ೧೦೦ ಶತಕೋಟಿ ಡಾಲರ್ ಮೌಲ್ಯದ ವ್ಯಾಪಾರದ ಗುರಿ- ರಷ್ಯಾ ಮೊದಲ ಉಪಪ್ರಧಾನಿ ಡೆನಿಸ್ ಮ್ಯಾಂಟುರೊವ್

<><><><>

ಲೋಕಸಭೆಯಲ್ಲಿಂದು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಜಾರ್ಜಿಯಾ ಸಂಸತ್ತಿನ ಅಧ್ಯಕ್ಷ ಶಲ್ವಾ ಪಪುವಾಶ್ವಿಲಿ ಅವರ ನೇತೃತ್ವದ ಜಾರ್ಜಿಯಾ ಸಂಸದೀಯ ನಿಯೋಗವನ್ನು ಸ್ವಾಗತಿಸಿದರು. ಭಾರತಕ್ಕೆ ಸಂಸದೀಯ ನಿಯೋಗದ ಈ ಭೇಟಿಯು ಉಭಯ ದೇಶಗಳ ನಡುವಿನ ಸಂಬಂಧದ ಸಂಕೇತವಾಗಿದ್ದು, ದ್ವಿಪಕ್ಷೀಯ ಸಹಕಾರ ಮತ್ತು ಸಂಬಂಧಗಳನ್ನು ಮತ್ತಷ್ಟು ಬಲಪಡಿಸುತ್ತದೆ ಎಂದಿದ್ದಾರೆ. ಬಳಿಕ ಲೋಕಸಭಾಧ್ಯಕ್ಷರು ಪ್ರಶ್ನೋತ್ತರ ಕಲಾಪವನ್ನು ಕೈಗೆತ್ತಿಕೊಂಡಾಗ, ವಿರೋಧ ಪಕ್ಷದ ಸದಸ್ಯರು, ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಘೋಷಣೆಗಳನ್ನು ಕೂಗುವ ಮೂಲಕ ಅಸಮಾಧಾನ ವ್ಯಕ್ತಪಡಿಸಿದರು. ಗದ್ದಲದ ನಡುವೆಯೇ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಸಚಿವರು ಉತ್ತರಿಸಿದರು. ಈ ನಡುವೆ, ಕಾಂಗ್ರೆಸ್, ಟಿಎಂಸಿ, ಡಿಎಂಕೆ. ಎಸ್‌ಪಿ ಮತ್ತು ಇತರ ವಿರೋಧ ಪಕ್ಷಗಳ ಸದಸ್ಯರು ಸದನದ ಬಾವಿಗಳಿದು ವಿವಿಧ ವಿಷಯಗಳ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು. ಲೋಕಸಭಾಧ್ಯಕ್ಷರ ಮನವಿ ನಂತರವೂ ಗದ್ದಲ ಮುಂದುವರಿದ ಪರಿಣಾಮ ಸದನವನ್ನು ಮೊದಲಿಗೆ ೧೨ ಗಂಟೆಯವರೆಗೆ

ಮುಂದೂಡಲಾಗಿತ್ತು. ನಂತರ ಕಲಾಪ ಪುನರಾರಂಭಗೊಂಡಾಗಲು ಗದ್ದಲ ಮುಂದುವರಿದ ಹಿನ್ನೆಲೆ ಕಲಾಪವನ್ನು ಮಧ್ಯಾಹ್ನ ೨ ಗಂಟೆಯವರೆಗೆ ಮುಂದೂಡಲಾಗಿದೆ.

<><><>

ರಾಜ್ಯಸಭೆಯಲ್ಲಿ ಬಿಹಾರ, ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಕೇರಳ ಸೇರಿದಂತೆ ೧೨ ಚುನಾವಣೆ ನಡೆಯಲಿರುವ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ ಕುರಿತು ಚರ್ಚೆಗೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಒತ್ತಾಯಿಸಿದರು. ಇದರ ಬೆನ್ನಲ್ಲೆ ಆಡಳಿತಾರೂಡ ಪಕ್ಷದ ಸದಸ್ಯರು ಹಾಗೂ ವಿರೋಧ ಪಕ್ಷದ ಸದಸ್ಯರ ನಡುವೆ ಮಾತಿನ ಚಕಮಕಿ ನಡೆಯಿತು. ಮುಂದೂಡಿಕೆ ನಿರ್ಣಯಕ್ಕಾಗಿ ನಿಯಮ ೨೬೭ ಅನ್ನು ಪ್ರಸ್ತಾಪಿಸಿದ ಮಲ್ಲಿಕಾರ್ಜುನ ಖರ್ಗೆ, ಸರ್ಕಾರ ಹಲವು ಮತದಾರರನ್ನು ಕಡೆಗಣಿಸಿದ್ದು, ಅವರನ್ನು ಮತದಾನದಿಂದ ವಂಚಿತರನ್ನಾಗಿಸಿದೆ. ಇದು ಪ್ರಜಾಪ್ರಭುತ್ವವನ್ನು ದುರ್ಬಲಗೊಳಿಸಿದೆ ಎಂದು ಆರೋಪಿಸಿದರು. ಇದೇ ರೀತಿಯ ಆರೋಪ ಪ್ರತ್ಯಾರೋಪದ ನಡುವೆ ಪ್ರತಿಪಕ್ಷಗಳು ಎತ್ತುತ್ತಿರುವ ವಿಷಯಗಳ ಗಂಭೀರತೆಯನ್ನು ಒಪ್ಪಿಕೊಂಡ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ದೇಶದಲ್ಲಿ ಹಲವು ಸಮಸ್ಯೆಗಳಿವೆ. ಚರ್ಚೆಗಳಲ್ಲಿ ತೊಡಗಿ, ಬಗೆಹರಿಸಲು ಪ್ರಯತ್ನಿಸಬೇಕು. ಕೇವಲ ಒಂದರ ಮೇಲೆ ಗಮನ ಕೇಂದ್ರೀಕರಿಸಬಾರದು ಎಂದರು. ನಂತರ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ಗದ್ದಲ ಮುಂದುವರಿದು ಅದನ್ನು ಹತೋಟಿಗೆ ತರಲು ಸಭಾಪತಿಗಳು, ಪ್ರಯತ್ನಿಸಿದರು. ಬಳಿಕ ಕಲಾಪವನ್ನು ಮಧ್ಯಾಹ್ನ ೨ ಗಂಟೆಗೆ ಮುಂದೂಡಿದರು. ದಿನದ ಕಲಾಪಗಳು ಆರಂಭವಾಗುವುದಕ್ಕೂ ಮುನ್ನ ಸಂಸತ್ತಿನ ಆವರಣದಲ್ಲಿ ಇಂದು ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಮತ್ತು ಚುನಾವಣಾ ಸುಧಾರಣೆಗಳನ್ನು ಖಂಡಿಸಿ ಪ್ರತಿಪಕ್ಷ ಸದಸ್ಯರು ಫಲಕಗಳು ಹಾಗೂ ಬ್ಯಾನರ್ ಹಿಡಿದು ಪ್ರತಿಭಟನೆ ನಡೆಸಿದರು.

<><><>

ಗ್ರಾಮೀಣ ಆರ್ಥಿಕತೆಯನ್ನು ಬಲಪಡಿಸಲು ಕೇಂದ್ರ ಸರ್ಕಾರ ಕಳೆದ ನಾಲ್ಕು ವರ್ಷಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ಹಲವಾರು ಕ್ರಾಂತಿಕಾರಿ ಕ್ರಮಗಳನ್ನು ತೆಗೆದುಕೊಂಡಿದೆ ಎಂದು ಸಹಕಾರಿ ಖಾತೆ ರಾಜ್ಯ ಸಚಿವ ಮುರಳೀಧರ್ ಮೊಹೋಲ್ ಹೇಳಿದ್ದಾರೆ. ಇಂದು ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಪೂರಕ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ದೇಶದಲ್ಲಿ ಸಹಕಾರಿ ಸಂಘಗಳನ್ನು ಬಲಪಡಿಸಲು ಸರ್ಕಾರ ಸಹಕಾರ ಸಚಿವಾಲಯವನ್ನು ಸ್ಥಾಪಿಸಿದೆ. ದೇಶಾದ್ಯಂತ ಎಂಟು ಲಕ್ಷ ಸಹಕಾರಿ ಸಂಘಗಳಿವೆ ಮತ್ತು ಸುಮಾರು ೩೦ ಕೋಟಿ ಜನರು ಈ ಸಂಘಗಳಲ್ಲಿ ನೇರವಾಗಿ

ಸದಸ್ಯರಾಗಿದ್ದಾರೆ ಎಂದು ಅವರು ಹೇಳಿದರು. ಇಂದು ದೇಶದ ಜನಸಂಖ್ಯೆಯ ಶೇಕಡಾ ೫೦ ರಷ್ಟು ಜನರು ಸಹಕಾರಿ ಸಂಘಗಳೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂದು ಸಚಿವರು ಹೇಳಿದರು.

<><><>

ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಮಾಡಲು ಎಲ್ಲಾ ವಲಯಗಳಲ್ಲಿ ಮತ್ತು ಎಲ್ಲಾ ರಾಜ್ಯಗಳಲ್ಲಿನ ಅಭಿವೃದ್ಧಿ ನಿರ್ಣಾಯಕ ಎಂದು ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ಹೇಳಿದ್ದಾರೆ. ಲೋಕಸಭೆಯಲ್ಲಿ ಇಂದು ಪ್ರಶ್ನೋತ್ತರ ಅವಧಿಯಲ್ಲಿ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಯೋಜನೆ ಪಿ.ಎಂ.ಎಂ.ಎಸ್.ವೈ ಮೀನುಗಾರಿಕೆ ಕ್ಷೇತ್ರದಲ್ಲಿ ಕ್ರಾಂತಿಯನ್ನು ತಂದಿದೆ ಎಂದು ಹೇಳಿದರು. ಕೇಂದ್ರವು ಈ ಯೋಜನೆಯಡಿ ಬಿಡುಗಡೆ ಮಾಡಿದ ಮೊತ್ತವನ್ನು ಪಶ್ಚಿಮ ಬಂಗಾಳ ಸರ್ಕಾರ ಖರ್ಚು ಮಾಡದಿರುವುದು ದುರದೃಷ್ಟಕರ ಎಂದು ಅವರು ಹೇಳಿದರು. ಪ್ರಸ್ತಾವಿತ ೨೨೧ ಕೋಟಿ ರೂಪಾಯಿಗಳಲ್ಲಿ ೧೧೪ ಕೋಟಿ ರೂಪಾಯಿಗಳನ್ನು ಈಗಾಗಲೇ ಕೇಂದ್ರ ಬಿಡುಗಡೆ ಮಾಡಿದೆ ಆದರೆ ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಕೇವಲ ೫೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ ಎಂದು ಸಚಿವರು ಹೇಳಿದರು. ಯಾವುದೇ ಯೋಜನೆಯ ಯಶಸ್ಸಿಗೆ ರಾಜ್ಯ ಸರ್ಕಾರದ ಸಹಕಾರ ಬಹಳ ಮುಖ್ಯ ಎಂದು ಅವರು ಹೇಳಿದರು.

<><><>

ಅಮೆರಿಕದಲ್ಲಿನ ಭಾರತದ ರಾಯಭಾರಿ ವಿನಯ್ ಕ್ವಾತ್ರಾ, ಇಂಧನ, ರಕ್ಷಣೆ ಮತ್ತು ವ್ಯಾಪಾರದಲ್ಲಿ ದ್ವಿಪಕ್ಷೀಯ ಸಹಕಾರವನ್ನು ಬಲಪಡಿಸುವ ಕುರಿತು ಅಮೆರಿಕಾದ ನೀತಿ ನಿರೂಪಕರೊಂದಿಗೆ ಫಲಪ್ರದ ಸಂಭಾಷಣೆಗಳನ್ನು ನಡೆಸಿದ್ದಾರೆ. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ವಾಷಿಂಗ್ಟನ್‌ನಲ್ಲಿರುವ ರಾಯಭಾರಿಯ ಅಧಿಕೃತ ನಿವಾಸವಾದ ಇಂಡಿಯಾ ಹೌಸ್‌ನಲ್ಲಿ ಅಮೆರಿಕ ಸೆನೆಟರ್‌ಗಳಾದ ಲಿಂಡ್ಸೆ ಗ್ರಹಾಂ, ರಿಚರ್ಡ್ ಬ್ಲೂಮೆಂಥಾಲ್, ಶೆಲ್ಡನ್ ವೈಟ್‌ಹೌಸ್, ಪೀಟರ್ ವೆಲ್ಚ್, ಡ್ಯಾನ್ ಸುಲ್ಲಿವನ್ ಮತ್ತು ಮಾರ್ಕ್‌ವೇನ್ ಮುಲ್ಲಿನ್ ಅವರ ಆತಿಥ್ಯ ವಹಿಸುವ ಗೌರವ ಸಿಕ್ಕಿದೆ ಎಂದು ಕ್ವಾತ್ರಾ ಹೇಳಿದ್ದಾರೆ. ನವದೆಹಲಿ ಮತ್ತು ವಾಷಿಂಗ್ಟನ್ ನಡುವಿನ ಬಲವಾದ ಸಂಬಂಧಕ್ಕಾಗಿ ನೀಡಿದ ಬೆಂಬಲಕ್ಕಾಗಿ ಅವರು ಕೃತಜ್ಞತೆಯನ್ನು ವ್ಯಕ್ತಪಡಿಸಿದರು.

<><><>

ತೆರಿಗೆ ವಿಷಯಗಳಲ್ಲಿ ಭಾರತಕ್ಕೆ ಪಾರದರ್ಶಕತೆ ಯಾವಾಗಲೂ ಆಡಳಿತಾತ್ಮಕ ಸುಧಾರಣೆಗಳನ್ನು ಮೀರಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ನವದೆಹಲಿಯಲ್ಲಿ ಇಂದು ನಡೆದ ೧೮ ನೇ ಜಾಗತಿಕ ವೇದಿಕೆಯ ಸಮಗ್ರ ಸಭೆಯನ್ನು ಉದ್ದೇಶಿಸಿ

ಮಾತನಾಡಿದ ಅವರು, ದೇಶವು ಆರ್ಥಿಕ ಆಡಳಿತದ ತತ್ವವನ್ನು ಅನುಸರಿಸುತ್ತದೆ ಎಂದು ಹೇಳಿದರು. ಪಾರದರ್ಶಕತೆಯನ್ನು ಅನುಸರಣೆಯ ಸಾಧನವಾಗಿ ನೋಡದೆ ಸುಸ್ಥಿರ ಅಭಿವೃದ್ಧಿ ಮತ್ತು ಹಣಕಾಸಿನ ಸ್ಥಿತಿಸ್ಥಾಪಕತ್ವಕ್ಕೆ ಅಡಿಪಾಯವಾಗಿ ನೋಡುವುದು ಮುಖ್ಯ ಎಂದು ಅವರು ಹೇಳಿದರು. ಕಳೆದ ದಶಕದಲ್ಲಿ ದೇಶದಲ್ಲಿ ಸ್ವಯಂಪ್ರೇರಿತ ತೆರಿಗೆ ಅನುಸರಣೆ ಗಮನಾರ್ಹವಾಗಿ ಬಲಗೊಂಡಿದೆ , ಪ್ರಾಮಾಣಿಕತೆಗೆ ಪ್ರತಿಫಲ ಸಿಗುತ್ತದೆ ಮತ್ತು ತೆರಿಗೆ ವಂಚನೆಯನ್ನು ದೃಢವಾಗಿ ನಿಭಾಯಿಸಲಾಗುತ್ತದೆ. ನಾಗರಿಕರು ಈಗ ತೆರಿಗೆ ವ್ಯವಸ್ಥೆಯಲ್ಲಿ ಭಾಗವಹಿಸಲು ಹೆಚ್ಚು ಸಿದ್ಧರಿದ್ದಾರೆ ಎಂದು ಅವರು ಪ್ರತಿಪಾದಿಸಿದರು.

**ಧ್ವನಿ: ನಿರ್ಮಲಾ ಸೀತಾರಾಮನ್ ( ೧೭ ಸೆಕೆಂಡ್ಸ್ )**

<><><><>

ರಷ್ಯಾ ೨೦೩೦ ರ ವೇಳೆಗೆ ಭಾರತದೊಂದಿಗೆ ೧೦೦ ಶತಕೋಟಿ ಡಾಲರ್ ವ್ಯಾಪಾರವನ್ನು ತಲುಪುವ ಗುರಿ ಹೊಂದಿದೆ ಎಂದು ರಷ್ಯಾದ ಮೊದಲ ಉಪಪ್ರಧಾನಮಂತ್ರಿ ಡೆನಿಸ್ ಮ್ಯಾಂಟುರೊವ್ ಹೇಳಿದ್ದಾರೆ. ಈ ಮಹತ್ವಾಕಾಂಕ್ಷೆಯ ಗುರಿ ಸಾಧಿಸಲು ಸರ್ಕಾರಗಳು, ವ್ಯವಹಾರಗಳು ಮತ್ತು ಹಣಕಾಸು ಸಂಸ್ಥೆಗಳಿಂದ ಸಂಘಟಿತ ಕೆಲಸ ಅಗತ್ಯವಿದೆ ಎಂದು ಅವರು ತಿಳಿಸಿದ್ದಾರೆ. ಸಂದರ್ಶನವೊಂದರಲ್ಲಿ ಮಾತನಾಡಿದ ಅವರು, ಸಹಕಾರಕ್ಕಾಗಿ ಪರಿಸ್ಥಿತಿಗಳನ್ನು ಸುಧಾರಿಸುವ ಮೂಲಕ ರಷ್ಯಾ ವ್ಯಾಪಾರ ಸಂಬಂಧಗಳನ್ನು ಬೆಂಬಲಿಸುತ್ತದೆ. ಅಂತರಸರ್ಕಾರಿ ಆಯೋಗದ ನಿಯಮಿತ ಸಭೆಗಳು ಹೂಡಿಕೆ ಯೋಜನೆಗಳನ್ನು ಪರಿಶೀಲಿಸಲು ಸಹಾಯ ಮಾಡುತ್ತದೆ ಎಂದರು. ಯಶಸ್ವಿ ಸಹಯೋಗದ ಕುರಿತು ಮಾತನಾಡುತ್ತಾ ಅವರು, ಭಾರತದಲ್ಲಿ ವಂದೇ ಭಾರತ್ ರೈಲುಗಳ ಜಂಟಿ ಉತ್ಪಾದನೆಯ ಬಗ್ಗೆ ಉಲ್ಲೇಖಿಸಿದರು. ಇತರ ಯೋಜನೆಗಳು ಅಭಿವೃದ್ಧಿ ಹಂತದಲ್ಲಿವೆ ಎಂದು ಹೇಳಿದರು. ದ್ವಿಪಕ್ಷೀಯ ವ್ಯಾಪಾರಕ್ಕಾಗಿ ನಿಯಂತ್ರಕ ಚೌಕಟ್ಟನ್ನು ಸುಧಾರಿಸುವ ಗುರಿಯನ್ನು ಹೊಂದಿರುವ ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ ಮಾತುಕತೆಗಳನ್ನು ಪ್ರಾರಂಭಿಸಲಾಗಿದೆ ಎಂದು ಅವರು ಗಮನಿಸಿದರು.

<><><><>

ಶಂಖುಮುಖಂನಲ್ಲಿ ನಾಳೆ ನೌಕಾ ಶಕ್ತಿ ಪ್ರದರ್ಶನ ನಡೆಯಲಿದೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ನಿನ್ನೆ ಸಂಜೆ ತಿರುವನಂತಪುರದ ಶಂಖುಮುಖಂನಲ್ಲಿ ನೌಕಾ ಶಕ್ತಿ ಪ್ರದರ್ಶನದ ಪೂರ್ಣ ಡ್ರೆಸ್ ರಿಹರ್ಸಲ್ ಅನ್ನು ನಡೆಸಲಾಯಿತು. ಈ ವೇಳೆ, ದೇಶದ ಹೆಮ್ಮೆಯ ಐಎನ್ಎಸ್ ವಿಕ್ರಾಂತ್, ಸಾರ್ವಜನಿಕರ ಗಮನ ಸೆಳೆಯಿತು. ಯುದ್ಧ ವಿಮಾನವು

ವಿಮಾನವಾಹಕ ನೌಕೆಯಿಂದ ಹಾರುತ್ತಿದ್ದಂತೆ ಉತ್ಸಾಹ ಉತ್ತುಂಗಕ್ಕೇರಿತು, ಪೂರ್ವಾಭ್ಯಾಸವನ್ನು ವೀಕ್ಷಿಸಲು ನೆರೆದಿದ್ದ ದೊಡ್ಡ ಜನಸಮೂಹವನ್ನು ಆಕರ್ಷಿಸಿತು.

<><><><>

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಅಸ್ಸಾಂ ಜನತೆಗೆ ಅಸ್ಸಾಂ ದಿವಸದ ಶುಭಾಶಯ ಕೋರಿದ್ದಾರೆ. ಈ ದಿನವು ಅಹೋಮ್ ಯುಗದ ವೈಭವವನ್ನು ಸ್ಮರಿಸುತ್ತದೆ ಮತ್ತು ಅಸ್ಸಾಂನ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ರಾಷ್ಟ್ರದ ಸಂಕಲ್ಪವನ್ನು ಬಲಪಡಿಸುತ್ತದೆ ಎಂದು ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

<><><><>

ಚಿಲಿಯ ಸ್ಯಾಂಟಿಯಾಗೊದಲ್ಲಿ ನಡೆಯುತ್ತಿರುವ ಎಫ್‌ಐಎಚ್ ಜೂನಿಯರ್ ಮಹಿಳಾ ಹಾಕಿ ವಿಶ್ವಕಪ್‌ನಲ್ಲಿ ಭಾರತೀಯ ಕಿರಿಯರ ತಂಡ, ನಮೀಬಿಯಾ ವಿರುದ್ಧ ೧೩-೦ ಅಂತರದ ಗೆಲುವಿನೊಂದಿಗೆ ಉತ್ತಮ ಆರಂಭ ಕಂಡಿದ್ದಾರೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>